ಪರಿಣಾಮವನ್ನೂ ಮಾಡಲಿಲ್ಲ. ಬದಲಿಗೆ ಅಳುತ್ತಿದ್ದ ಮಗು ಮತ್ತು ಅದನ್ನು ಸಮಾಧಾನ ಮಾಡುತ್ತಿದ್ದ ತಾಯಿಯ ಕಡೆಗೆ ಅವರ ಮನಸ್ಸು ಹರಿಯಿತು. ತಮ್ಮ ಮಕ್ಕಳು ಇಷ್ಟು ಪುಟ್ಟವರಾಗಿರುವಾಗ ವಿಮಾನದಲ್ಲಿ ಪ್ರಯಾಣಿಸುವ ಪ್ರಸಂಗವೇ ಬರಲಿಲ್ಲ ಎಂದು ಸಮಾಧಾನವಾಯಿತು. ಇಂದು ಬದುಕು ಯಾಕಿಷ್ಟು ಸಮಸ್ಯೆಯಾಗಿದೆ ಎಂದು ಅಚ್ಚರಿಪಟ್ಟರು. ಅವರಿಗೆ ಐವತ್ತು ವರ್ಷಗಳಾಗುವವರೆಗೂ ವಿದೇಶ ಪ್ರಯಾಣ ಮಾಡುವ ಸಂದರ್ಭವೇ ಬಂದಿರಲಿಲ್ಲ. ಪ್ರತಿಷ್ಠಿತ ಕಂಪೆನಿಯಲ್ಲಿ ಎಂಜಿನಿಯರ್ ಆಗಿದ್ದರೂ ಸಹ ಆ ಅವಕಾಶ ಒದಗಿರಲಿಲ್ಲ. ಈಗ ವಿದೇಶ ಪ್ರಯಾಣ ಮೈಸೂರು ಬೆಂಗಳೂರಿನ ನಡುವಿನ ಪ್ರಯಾಣದಷ್ಟೇ ಸುಲಭವಾಗಿದೆ. ಮತ್ತು ಅಷ್ಟೇ ಸಾಮಾನ್ಯವಾಗಿದೆ. ಹತ್ತಿಪ್ಪತ್ತು ವರ್ಷಗಳ ಹಿಂದೆ ವಿದೇಶಕ್ಕೆ ಹೋಗುವುದು ಅಪರೂಪದ ಘಟನೆಯಾಗಿತ್ತು. ಇಂದು ಅದು ಸಾಮಾನ್ಯ ಸಂಗತಿಯಾಗಿದೆ!

ವಿಮಾನದ ಹೊಯ್ದಾಟ ತುಸು ಕಡಿಮೆಯಾಯಿತು. ಬೆಂಗಳೂರು ತಲುಪುವಾಗ ಬೆಳಗಿನ ಜಾವವಾಗಿರುತ್ತದೆ. ಹೋದ ಮೇಲೆ ಟ್ಯಾಕ್ಸಿ ಹಿಡಿದು ಮನೆಗೆ ಹೋದರೆ ಮತ್ತೆ ಮಲಗಲಾಗುವುದಿಲ್ಲ. ಇಲ್ಲೇ ಒಂದಿಷ್ಟು ನಿದ್ರೆ ಮಾಡೋಣ ಎಂದು ದೇವರಾಜು ಮತ್ತೆ ಕಣ್ಮುಚ್ಚಿ ನಿದ್ರಿಸಲು ಪ್ರಯತ್ನಿಸಿದರು. ಒಂದಿಷ್ಟು ಜೋಂಪು ಹಿಡಿಯಿತು. ಅದು ನಿದ್ರೆಯೂ ಅಲ್ಲ, ಎಚ್ಚರ ಕೂಡ ಅಲ್ಲ. ಅಂತಹ ಸ್ಥಿತಿ. ಆ ಸ್ಥಿತಿಯಲ್ಲಿಯೇ ಮನಸ್ಸು ಹಲವು ವಿಷಯಗಳನ್ನು ಯೋಚಿಸುತ್ತಿತ್ತು. ಈ ಮನಸ್ಸಿಗೆ ವಿಶ್ರಾಂತಿ ಎಂಬುದೇ ಇಲ್ಲವೇ? ಎಚ್ಚರದಲ್ಲೂ ಯೋಚನೆಗಳು, ನಿದ್ರೆಯಲ್ಲೂ ಯೋಚನೆಗಳು! ಮನಸ್ಸಿಗೆ ವಿಶ್ರಾಂತಿ ಎಂದು? ಬಹುಶಃ ಅದು ಈ ದೇಹ ಬಿಟ್ಟಾಗಲೇ ಎನ್ನಿಸಿತು. ಆದರೆ, ದೇಹ ಬಿಟ್ಟಾಗಲೂ ಯೋಚನೆಗಳು ಇರುವುದಿಲ್ಲ ಎನ್ನುವುದಕ್ಕೆ ಯಾವುದೇ ಪುರಾವೆ ಇಲ್ಲ. ದೇಹ ಬಿಟ್ಟಾಗ ನಮ್ಮ ಅಸ್ತಿತ್ವ ಅಳಿದಿರುತ್ತದೆಯೋ ಇಲ್ಲವೋ ಗೊತ್ತಿಲ್ಲ! 'ನಾನು' ಎನ್ನುವುದು ಈ ದೇಹವಲ್ಲ, ಅದು ಆತ್ಮ. ಅದು ಅವಿನಾಶಿ. ಅದಕ್ಕೆಂದೂ ಸಾವೇ ಇಲ್ಲ. ಈ ಜಗತ್ತಿನ ಹುಟ್ಟಿನೊಂದಿಗೇ ಹುಟ್ಟಿ ಜಗತ್ತು ಅಳಿದಾಗಲೇ ಅದೂ ಅಳಿಯುತ್ತದೆ! ಎನ್ನುವ ಓದಿದ ವಿಷಯಗಳನ್ನು ದೇವರಾಜು ನೆನಪು ಮಾಡಿಕೊಂಡರು.

ಇದ್ದಕ್ಕಿದ್ದಂತೆ ಯಾರೋ ಭುಜ ತಟ್ಟಿದಂತಾಯಿತು. ದೇವರಾಜುಗೆ ಎಚ್ಚರವಾಯಿತು. ಹುಟ್ಟು ಸಾವಿನ ಜಿಜ್ಞಾಸೆಯಲ್ಲಿ ಅದೆಷ್ಟು ಸಮಯ ಕಳೆಯಿತು ಎನ್ನುವ ನೆನಪೇ ಇರಲಿಲ್ಲ. ಇದ್ದಕ್ಕಿದ್ದಂತೆ ಏನೋ ಗೊಂದಲ ಶುರುವಾದಂತಿತ್ತು. ಜನರು ಮಾತಾಡುತ್ತಿದ್ದರು. ಧ್ವನಿವರ್ಧಕದಿಂದ ಏನೋ ಅನೌನ್ಸ್‌ಮೆಂಟ್ ಬರುತ್ತಿತ್ತು. ಮಂಪರಿನಂತಹ ಸ್ಥಿತಿಯಲ್ಲಿದ್ದ ದೇವರಾಜುಗೆ ತಕ್ಷಣಕ್ಕೆ ಏನು ನಡೆಯುತ್ತಿದೆ ಎನ್ನುವುದರ ಅರಿವಾಗಲಿಲ್ಲ. ಕಣ್ಣು ಬಿಟ್ಟು ಪಕ್ಕದ ಸೀಟಿನ ಸಹ ಪ್ರಯಾಣಿಕನನ್ನು ಕೇಳಿದರು:

"ಎನಿ ಪ್ರಾಬ್ಲಮ್?"

"ವಿ ಆರ್ ಇನ್ ಡೇಂಜರ್... ಹಿಯರ್ ದಟ್" ಎಂದ! ಅವನು ಗಾಬರಿಗೊಂಡಿದ್ದ.

ಧ್ವನಿವರ್ಧಕದಿಂದ ಬರುತ್ತಿದ್ದ ಮಾತುಗಳತ್ತ ಗಮನಹರಿಸಲು ಪ್ರಯತ್ನಿಸಿದರು ದೇವರಾಜು. ಆ ಸಮಯಕ್ಕಾಗಲೇ ವಿಮಾನದಲ್ಲಿ ಆತಂಕ ಮತ್ತು ಗೊಂದಲದ ವಾತಾವರಣ ಸೃಷ್ಟಿಯಾಗಿತ್ತು. ಜನರೆಲ್ಲ ದೊಡ್ಡ ದನಿಯಲ್ಲಿ ಮಾತಾಡುತ್ತಿದ್ದರು.

"ರನ್ ವೇ ವಿಸಿಬಿಲಿಟಿ ತುಂಬಾ ಕ್ಷೀಣವಾಗಿದೆ. ಕಳೆದೆರಡು ದಿನಗಳಿಂದ ಇಲ್ಲಿ ಚಂಡಮಾರುತ ಇದೆ. ಎಡಬಿಡದೆ ಮಳೆ ಸುರಿಯುತ್ತಿದೆ. ಮತ್ತೆ ವಿಮಾನ ನಿಲ್ದಾಣದಿಂದ ಸ್ವಲ್ಪ ದೂರ ಹೋಗುತ್ತದೆ. ಲ್ಯಾಂಡಿಂಗ್ ಸ್ವಲ್ಪ ತಡವಾಗಬಹುದು. ಯಾರೂ ಆತಂಕಪಡಬೇಕಾಗಿಲ್ಲ.